# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@gmail.com

6th Floor,
Kaveri Bhavan,
Bangalore-560009.


ಸಂಖ್ಯೆ: ಕೆಇಪಿಜಿಟಿ/ಕೆಸಿಒ123/ಪಿ19/2021-22/ CYS-05 ದಿನಾಂಕ: 07 JUN 2021

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ & ವಾ),
   ಬೆವಿಕಂ.
2. ಮುಖ್ಯ ಆರ್ಥಿಕ ಅಧಿಕಾರಿ,
   ಗುವಿಕಂ/ಹುವಿಕಂ/ಮವಿಕಂ/ಚಾವಿಸನಿ
3. ಆರ್ಥಿಕ ಸಲಹೆಗಾರರು(ಲೆ & ಸಂ),
   ಕವಿಪ್ರನಿನಿ.

ನೆನಪೋಲೆ

ಮಾನ್ಯರೇ,

ವಿಷಯ: ಕೇಂದ್ರ ಸರ್ಕಾರದ ಜೀವನ ಪ್ರಮಾಣ ಪೋರ್ಟಲ್' ಮುಖಾಂತರ ಡಿಜಿಟಲ್ ಜೀವಿತ ಪ್ರಮಾಣ ಪತ್ರವನ್ನು ಸಲ್ಲಿಸುವ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: 1. ನಿಗಮದ ಸುತ್ತೋಲೆ ಸಂಖ್ಯೆ ಕೆಇಪಿಜಿಟಿ/ಕೆಸಿಒ123/ಪಿ19/2014-15/ಸಿವೈಎಸ್-17 ದಿನಾಂಕ: 07.07.2014.
2. ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ. ಆಇ(ವಿಶೇಷ)184 ಪಿಇಎನ್ 2014 ದಿನಾಂಕ 13.07.2015.
3. ಈ ಕಛೇರಿ ಪತ್ರ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ19/2020-21/ಸಿವೈಎಸ್-07 ದಿನಾಂಕ 01.03.2021.

************

ಕೇಂದ್ರ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ (Ministry of Electronics and Information Technology) ಇಲಾಖೆಯು ಡಿಜಿಟಲ್ ಜೀವನ ಪ್ರಮಾಣ ಪತ್ರವನ್ನು ಪಡೆಯಲು 'ಜೀವನ್ ಪ್ರಮಾಣ್' ಎಂಬ ವೆಬ್‌ತಾಣವನ್ನು ಅಭಿವೃದ್ಧಿಪಡಿಸಿದ್ದು, ಈ ವಿಧಾನವನ್ನು ಪಿಂಚಣಿದಾರರ ಅನುಕೂಲಕ್ಕಾಗಿ ಕವಿಪ್ರನಿನಿ/ವಿಸಕಂಗಳಲ್ಲಿಯೂ **ಹೆಚ್ಚುವರಿ ಆಯ್ಕೆಯಾಗಿ** ಅಳವಡಿಸಿಕೊಳ್ಳಲು ಪಿಂಚಣಿ ಬಟವಾಡೆ ಅಧಿಕಾರಿಗಳು ಪಿಂಚಣಿ/ಕುಟುಂಬ ಪಿಂಚಣಿದಾರರ ಆಧಾರ್ ಮತ್ತು ಮೊಬೈಲ್ ಸಂಖ್ಯೆಗಳನ್ನು ಪಡೆಯುವ ಕುರಿತು ತಮ್ಮ ವ್ಯಾಪ್ತಿಯ ಪಿಂಚಣಿ ಬಟವಾಡೆ ಲೆಕ್ಕಘಟಕಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಹಾಗೂ ಅನುಸರಣಾ ವರದಿಯನ್ನು ಅಗತ್ಯ ಕ್ರಮಕ್ಕಾಗಿ ಈ ಕಛೇರಿಗೆ ಒದಗಿಸುವಂತೆ ಉಲ್ಲೇಖ-3ರ ಪತ್ರದಲ್ಲಿ ತಮ್ಮನ್ನು ಕೋರಲಾಗಿರುತ್ತದೆ. ಆದರೆ, ಇಲ್ಲಿಯವರೆಗೂ ತಮ್ಮಿಂದ ಮಾಹಿತಿಯು ಈ ಕಛೇರಿಯಲ್ಲಿ ಸ್ವೀಕೃತವಾಗಿರುವುದಿಲ್ಲ.

ಪಿಂಚಣಿ ಪಾವತಿ ನಿರ್ವಹಣೆ ವ್ಯವಸ್ಥೆ (PPMS) ತಂತ್ರಾಂಶದ ಡೇಟಾಬೇಸ್‌ನ್ನು ಪರಿಶೀಲಿಸಿದಾಗ 40,000 ಪಿಂಚಣಿ/ಕುಟುಂಬ ಪಿಂಚಣಿದಾರರ ಪೈಕಿ ಕೇವಲ 10,000 ಪಿಂಚಣಿ/ಕುಟುಂಬ ಪಿಂಚಣಿದಾರರ ಆಧಾರ್ ಸಂಖ್ಯೆಯನ್ನು ನಮೂದಿಸಿರುವುದು ಕಂಡು ಬಂದಿದ್ದು, ಪ್ರಗತಿಯು ಕೇವಲ 25% ಇದ್ದು, ಪಿಂಚಣಿ ಬಟವಾಡೆ ಲೆಕ್ಕಘಟಕಗಳು ಈ ಕಾರ್ಯದಲ್ಲಿ ಪೂರ್ಣ ಪ್ರಮಾಣಲ್ಲಿ ತೊಡಗಿಸಿಕೊಳ್ಳದಿರುವುದು ಕಂಡುಬರುತ್ತದೆ. ಈ ರೀತಿ ನಿಧಾನಗತಿಯು ಮುಂದುವರೆದಲ್ಲಿ ಪೂರ್ಣ ಪ್ರಮಾಣದ ಪ್ರಗತಿಯನ್ನು ಸಾಧಿಸಲು ಅಪಾರ ಕಾಲಾವಕಾಶ ಬೇಕಾಗುತ್ತದೆ.

ಬೆಂಗಳೂರಿನಲ್ಲಿರುವ ಬೆವಿಕಂನ ಕೆಲವು ವಿಭಾಗಗಳಲ್ಲಿ ಈ ಕೆಳಗಿನ ವಿನೂತನ ಕಾರ್ಯವಿಧಾನವನ್ನು ಅನುಸರಿಸುತ್ತಿರುವುದನ್ನು ಗಮನಿಸಲಾಗಿದ್ದು, ಬಹಳ ಸ್ಪೂರ್ತಿದಾಯಕವಾಗಿರುತ್ತದೆ.

> "ಪಿಂಚಣಿ ಬಟವಾಡೆ ಲೆಕ್ಕಘಟಕಗಳು ಈ ವ್ಯವಸ್ಥೆಯ ಪ್ರಯೋಜನವನ್ನು ವಿವರಿಸಿ ಬರೆದ ಪತ್ರದ ಜೊತೆ ಆಧಾರ್ ಪತ್ರಧಾರಕರ ಒಪ್ಪಿಗೆ ಪತ್ರದ ಪ್ರತಿ ಮತ್ತು ವಿಭಾಗದ ವಿಳಾಸ ಹೊಂದಿರುವ ಅಂಚೆ ಚೀಟಿ ಲಗತ್ತಿಸಿರುವ ಲಕೋಟೆಯನ್ನು (Self addressed envelop) ತಮ್ಮ ವ್ಯಾಪ್ತಿಯ ಪಿಂಚಣಿ/ಕುಟುಂಬ ಪಿಂಚಣಿದಾರರಿಗೆ ಕಳುಹಿಸಲಾಗುತ್ತಿದೆ. ಇದನ್ನು ಪಿಂಚಣಿ/ಕುಟುಂಬ ಪಿಂಚಣಿದಾರರು ಮಾಹಿತಿಗಳನ್ನು ಭರ್ತಿ ಮಾಡಿ ಆಧಾರ್ ಪ್ರತಿಯನ್ನು ಲಗತ್ತಿಸಿ ಲಕೋಟೆಯನ್ನು ಅಂಚೆ ಪಟ್ಟಿಗೆಗೆ ಹಾಕಿದ ತರುವಾಯ ಸಂಬಂಧಪಟ್ಟ ವಿಭಾಗದಲ್ಲಿ ಸ್ವೀಕೃತವಾಗುತ್ತದೆ".

ಮೇಲೆ ತಿಳಿಸಿದ ಕಾರ್ಯ ವಿಧಾನವನ್ನು ಅನುಸರಿಸುವುದರಿಂದ ಕೋವಿಡ್-19 ಜಾಗತಿಕ ಸಾಂಕ್ರಾಮಿಕ ರೋಗದ ಆರೋಗ್ಯ ತುರ್ತು ಪರಿಸ್ಥಿತಿಯ ಈ ಸಂದರ್ಭದಲ್ಲಿ ಹಿರಿಯ ನಾಗರೀಕರಾದ ಪಿಂಚಣಿ/ಕುಟುಂಬ ಪಿಂಚಣಿದಾರರು ಅನವಶ್ಯಕ ವಿಭಾಗೀಯ ಕಛೇರಿಗೆ ಭೇಟಿ ನೀಡುವುದನ್ನು ತಪ್ಪಿಸಿ ವೈರಸ್ ದಾಳಿಗೆ ತುತ್ತಾಗುವುದನ್ನು ತಪ್ಪಿಸಬಹುದಾಗಿದೆ ಹಾಗೂ ಸಂಬಂಧಪಟ್ಟ ಮಾಹಿತಿಯನ್ನು ಕ್ಲುಪ್ತ ಸಮಯದಲ್ಲಿ ಪಡೆಯಬಹುದಾಗಿರುತ್ತದೆ.

ಆದ್ದರಿಂದ, ಮೇಲೆ ತಿಳಿಸಿರುವ ಕಾರ್ಯವಿಧಾನವನ್ನಾಗಲೀ ಅಥವಾ ಇತರ ಭಿನ್ನ ರೀತಿಯ ಕ್ರಿಯಾತ್ಮಕ ವಿಧಾನವನ್ನಾಗಲೀ ಅನುಸರಿಸಿ ಜೀವನ ಪ್ರಮಾಣ ಪೋರ್ಟಲ್' ಮುಖಾಂತರ ಡಿಜಿಟಲ್ ಜೀವಿತ ಪ್ರಮಾಣ ಪತ್ರವನ್ನು ಸಲ್ಲಿಸುವ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಅತೀ ಜರೂರು ಸೂಕ್ತ ಕ್ರಮ ಕೈಗೊಳ್ಳುವಂತೆ ತಮ್ಮ ಕಾರ್ಯ ವ್ಯಾಪ್ತಿಯ ಪಿಂಚಣಿ ಬಟವಾಡೆ ಲೆಕ್ಕಘಟಕಗಳಿಗೆ ಕಟ್ಟುನಿಟ್ಟಾದ ನಿರ್ದೇಶನವನ್ನು ನೀಡುವಂತೆ ಕೋರಿದೆ. ಅಲ್ಲದೆ, ಈ ವಿಷಯಕ್ಕೆ ಸಂಬಂಧಿಸಿದಂತೆ, ಉಪ ಲೆಕ್ಕನಿಯಂತ್ರಣಾಧಿಕಾರಿ/ ನಿಯಂತ್ರಣಾಧಿಕಾರಿಗಳು ತಮ್ಮ ವೃತ್ತ/ವಲಯ ವ್ಯಾಪ್ತಿಯಲ್ಲಿ ಬರುವ ಪಿಂಚಣಿ ಬಟವಾಡೆ ಲೆಕ್ಕಘಟಕಗಳ ಕಾರ್ಯ ವಿಧಾನದ ಪ್ರಗತಿಯನ್ನು ವೈಯಕ್ತಿಕ ಗಮನಹರಿಸಿ ಮೇಲ್ವಿಚಾರಣೆ ಮಾಡಲೂ ಸಹ ಸೂಚಿಸಲು ಕೋರಿದೆ.

ಈ ವಿಷಯದಲ್ಲಿ ತಮ್ಮ ಕಛೇರಿಯಿಂದ ತೆಗೆದುಕೊಂಡ ಕ್ರಮದ ಕುರಿತು **ಅನುಸರಣಾ ವರದಿಯನ್ನು ಅಗತ್ಯ ಕ್ರಮಕ್ಕಾಗಿ ಹಾಗೂ ಈ ನಿಟ್ಟಿನಲ್ಲಿ ಆದ ಪ್ರಗತಿಯ ಬಗ್ಗೆ 15 ಜುಲೈ 2021ರೊಳಗೆ ಟ್ರಸ್ಟ್ ಕಛೇರಿಗೆ ಮಾಹಿತಿಯನ್ನು ಒದಗಿಸಲು ಕೋರಿದೆ.**

ತಮ್ಮ ವಿಶ್ವಾಸಿ,

ಆರ್ಥಿಕ ಸಲಹೆಗಾರರು & ವ್ಯವಸ್ಥಾಪಕ ಟ್ರಸ್ಟಿ,
ಕವಿಪ್ರನಿನಿ/ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್,

ಪ್ರತಿ:

ನಿರ್ದೇಶಕರು(ಆ & ಮಾಸಂ), ಕವಿಪ್ರನಿನಿ, ಕಾವೇರಿ ಭವನರವರ ಹಿರಿಯ ಆಪ್ತಕಾರ್ಯದರ್ಶಿ.

ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ, ಎಲ್ಲಾ ಕವಿಪ್ರನಿನಿ/ಎಸ್ಕಾಂ
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ಉಪ ಲೆಕ್ಕನಿಯಂತ್ರಣಾಧಿಕಾರಿ, ಎಲ್ಲ ಕವಿಪ್ರನಿನಿ/ಎಸ್ಕಾಂ
3. ಎಲ್ಲಾ ಲೆಕ್ಕಾಧಿಕಾರಿಗಳು/ಲೆಕ್ಕಾಧಿಕಾರಿ(ಆಂ.ಪ), ಕಾರ್ಯ ಮತ್ತು ಪಾಲನಾ ವಿಭಾಗ, ಎಲ್ಲ ವಿಸಕಂಗಳು.
4. ಲೆಕ್ಕಾಧಿಕಾರಿ, MRS ಶಿವಮೊಗ್ಗ, ಕವಿಪ್ರನಿನಿ.
5. ಲೆಕ್ಕಾಧಿಕಾರಿ(ಪಿಂಚಣಿ)/(ಪಿಂಚಣಿ ಕೋಶ), ಕವಿಪ್ರನಿನಿ/ವಿಸಕಂಗಳು

ಮು.ಕ